**ಓ.ಎಸ್. ನಂ. 338/ 2012** **ಪಿ ಡಬ್ಲ್ಯೂ – 3**

**ದಿನಾಂಕಃ 30.10.2019 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು – ಶ್ರೀ ಎಸ್ ಎಸ್ ಬಿ ವಕೀಲರಿಂದ**

1976 ನೇ ಸಾಲಿನಲಿ ನನಗೆ ಸುಮಾರು 23 ವರುಷ. ದಾವಾ ಸ್ವತ್ತಿನ ಸರ್ವೆ ನಂಬರ್ 85 ಇರುತ್ತದೆ. ದಾವಾ ಸ್ವತ್ತಿನ ಮಂಜೂರಾತಿ ಕೋರಿ ಭೂ ನ್ಯಾಯ ಮಂಡಳಿಗೆ ಯಾರು ಅರ್ಜಿ ಸಲ್ಲಿಸಿರುತ್ತಾರೆ ನನಗೆ ತಿಳಿದಿಲ್ಲ. ವಾದಿ ಹಾಗೂ ಪ್ರತಿವಾದಿಯರು ಸುಮಾರು 22 ವರುಷಗಳ ಹಿಂದೆ ಬೇರೆಯಾಗಿರುತ್ತಾರೆ . ಅಂದಿನಿಂದಲೂ ಅವರುಗಳು ಬೇರೆ **ಬೇರೆಯಾಗಿ** ವ್ಯವಹಾರ ಮಾಡುತ್ತಿರುತ್ತಾರೆ ಎಂದರೆ ಸರಿ . ವಾದಿ ಹಾಗೂ ಪ್ರತಿವಾದಿಯ ನಡುವೆ ಯಾವ ದಿನಾಂಕ ವಿಭಾಗ ಆಗಿರುತ್ತದೆ ನನಗೆ ತಿಳಿದಿಲ್ಲ. ಆ ಬಗ್ಗೆ ದಾಖಲೆ ಇಲ್ಲ. ದಾವಾ ಸ್ವತ್ತು ಪ್ರತಿವಾದಿಯರಿಗೆ ಸೇರಿದ್ದು ಅಂದರೆ ಸರಿಯಲ್ಲ. ಅದರಲ್ಲಿ ಪ್ರತಿವಾದಿಯರೇ ಸಂಪೂರ್ಣ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಮೃತ 1 ನೇ ವಾದಿಗೆ ಇಬ್ಬರು ಸೋದರಿಯರು ಇದ್ದರು ಎಂದರೆ ಸರಿ . ಆತನಿಗೆ ಬೇರೆ ಜಮೀನುಸಹ ಇದೆ ಎಂದರೆ ನನಗೆ ತಿಳಿದಿಲ್ಲ. ಇತ್ತೀಚೆಗೆ ಖರೀದಿಸಿರಬಹುದು. ದಾವಾ ಸ್ವತ್ತಿನ ಮೇಲೆ ವಾದಿಯರಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ವಾದಿಯರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಮೃತತ 1 ನೇ ವಾದಿ ಹಾಗೂ 1 ನೇ ಪ್ರತಿವಾದಿ ನನ್ನ ವಿರುದ್ದ ಈ ನ್ಯಾಯಾಲಯದಲ್ಲಿ ಒಎಸ್ ನಂ. 107/2007 ದಾವೆ ಹೂಡಿದ್ದರು ಎಂದರೆ ಸರಿ . ಆಗಿನಿಂದ 1 ನೇ ಪ್ರತಿವಾದಿ ವಿರುದ್ಧ ನನಗೆ ವೈಷಮ್ಯ ಇರುತ್ತದೆ ಎಂದರೆ ಸರಿಯಲ್ಲ

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಟಿ. ಶ್ರೀಕಾಂತ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.

ಓ.ಎಸ್. ನಂ. 338/ 2012 ಪಿ ಡಬ್ಲ್ಯೂ – 1

**ದಿನಾಂಕಃ 30.10.2019 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು – ಶ್ರೀ ಎಸ್ ಎಸ್ ಬಿ ವಕೀಲರಿಂದ**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿನ ಸಂಗತಿಗಳು ನನಗೆ ತಿಳಿದಿರುತ್ತದೆ. ನಾನು ಈ ದಾವೆಯನ್ನು ವಿಭಾಗ ಕೋರಿ ಹೂಡಿರುತ್ತೇನೆ. ನನ್ನ ಗಂಡ ಹಾಗೂ 1 ನೇ ಪ್ರತಿವಾದಿ ನಡುವೆ ಸುಮಾರು 30 ವರುಷಗಳ ಹಿಂದೆ ವಿಭಾಗ ಆಗಿರುತ್ತದೆ. ಅಂದಿನಿಂದಲೂ ನಾವು ಹಾಗೂ ಪ್ರತಿವಾದಿಯರು ಬೇರೆಬೇರೆ ವಾಸಿಸುತ್ತಿರುತ್ತೇವೆ. ಸದರಿ ವಿಭಾಗದಲ್ಲಿ ನಮಗೆ ಹಾಗೂ ಪ್ರತಿವಾದಿಯರಿಗೆ ದಾವಾಸ್ವತ್ತಿನಲ್ಲಿ ತಲಾ 63 ಸೆಂಟು ಪಾಲು ಬಂದಿರುತ್ತದೆ. ಕಳೆದ 30 ವರುಷಗಳಿಂದ ನಾವು ಹಾಗೂ ಪ್ರತಿವಾದಿಯರು ಬೇರೆ ಬೇರೆಯಾಗಿದ್ದು ನಮ್ಮ ವಿಳಾಸ ಬೇರೆ ಇರುತ್ತದೆ. ಹಾಗೂ ನಾವು ಸರ್ಕಾರದ ಸೌಲಭ್ಯಗಳನ್ನು ಬೇರೆಯಾಗಿ ಪಡೆಯುತ್ತೇವೆ. ನಾನು ಹಾಗೂ ನನ್ನ ಮಕ್ಕಳು ಬೇರೆ ಬೇರೆ ಇರುತ್ತೇವೆ. ದಾವಾ ಸ್ವತ್ತು ಅಲ್ಲದೇ ನಮ್ಮ ಹೆಸರಿಗೆ ಬೇರೆ 22 ಸೆಂಟು ಜಮೀನು ,ಒಂದು ಮನೆ ಇರುತ್ತದೆ ಎಂದರೆ ಸರಿ, ಅವುಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ನನ್ನ ಗಂಡನಿಗೆ ಇಬ್ಬರು ಸೋದರಿಯರು ಇರುತ್ತಾರೆ ಎಂದರೆ ಸಾಕ್ಷಿ ಅವರು ಈಗ ಮೃತಪಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಅವರುಗಳಿಗೆ ಮಕ್ಕಳು ಇರುತ್ತಾರೆ ಎಂದರೆ ಸರಿ. ಅವರುಗಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ನನ್ನ ಮಾವನಿಗೆ ಸ್ವಯಾರ್ಜಿತವಾಗಿ ಜಮೀನು ಇದ್ದು ಆದನ್ನು ಆತ ಮಾರಾಟ ಮಾಡಿರುತ್ತಾರೆ. ನನ್ನ ಮಾವ ಕೂಲಿ ಮಾಡಿ ಜೀವನ ಮಾಡುತ್ತಿದ್ದರು ಎಂದರೆ ಸರಿ. ಅದರಂತೆ ನನ್ನ ಗಂಡ ಹಾಗೂ ಪ್ರತಿವಾದಿ ಯರು ಕೂಲಿ ಮಾಡುತ್ತಾರೆ ಅಂದರೆ ಸರಿ . ದಾವಾ ಸ್ವತ್ತಿನಲ್ಲಿ ನನ್ನ ಗಂಡನ ಪಾಲಿಗೆ 63 ಸೆಂಟು ಬಂದ ಬಗ್ಗೆ ದಾಖಲೆ ಇರುವುದಿಲ್ಲ. ದಾವಾ ಸ್ವತ್ತು 1 ನೇ ಪ್ರತಿವಾದಿಯ ಹೆಸರಿಗೆ ಭೂ ನ್ಯಾಯ ಮಂಡಳಿಯಿಂದ ಮಂಜೂರು ಆಗಿರುತ್ತದೆ ಎಂದರೆ ಸಾಕ್ಷಿ ನನ್ನ ಮಾವನ ಹೆಸರಿಗೆ ಮಂಜೂರು ಆಗಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತನ್ನು 1 ನೇ ಪ್ರತಿವಾದಿ ಸಾಗುವಳಿ ಮಾಡುತ್ತಿದ್ದು ಅದು ಸರ್ಕಾರದಿಂದ ಆತನ ಹೆಸರಿಗೆ ಸ್ವತಂತ್ರವಾಗಿ ಮಂಜೂರು ಆಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ನನ್ನ ಮಾವನ ಹೆಸರಿಗೇ ಮಂಜೂರು ಆಗಿಲ್ಲ ಎಂದರೆ ಸರಿಯಲ್ಲ. ಭೂ ಮಂಜೂರಾತಿ ಕೋರಿ 1 ನೇ ಪ್ರತಿವಾದಿ ಅರ್ಜಿ ಸಲ್ಲಿಸಿರುತ್ತಾನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಾವು ಸ್ವಾಧಿನಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾವಾ

ಸ್ವತ್ತು ಪ್ರತಿವಾದಿಯರಿಗೆ ಸೇರಿದ್ದು ಅಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಕಬಳಿಸಲು ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು ಅಥವಾ ಪಾಲು ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಟಿ. ಶ್ರೀಕಾಂತ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.